Regd No. M 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 22] ಶುಕ್ರವಾರ 17—10—47 [ಬಿಡಿ ಪ್ರತಿ 3 ಪೈ

ಮೈಸೂರಿನ ಮುಸ್ಲಿಂ ಲೀಗು

ಮೈಸೂರು ಮಹಾರಾಜರು ನೊಸ್ಟೆ ಹೊರಡಿಸಿದ ಘೋಷಣೆಯ ವಿಚಾರ ಮಾಡಿ ಸಂಸ್ಥಾನದ ಮುಸ್ಲಿಂ ಲೀಗು ಈ ಘೋಷಣೆಯಲ್ಲಿ ಮುಸ್ಲಿಂ ಲೀಗಿನ ಮೂಲಭೂತ ಹಕ್ಕಾದ ಪ್ರತ್ಯೇಕ ಮತದಾರ ಸಂಘದ ವ್ಯವಸ್ಥೆ ಇಲ್ಲದ್ದರಿಂದ ಅದು ತ್ಯಾಜ್ಯವೆಂದು ಅಭಿಪ್ರಾಯ ವ್ಯಕ್ತ ಮಾಡಿ ತಮಗೆ ಸ್ವತಂತ್ರ ಪ್ರತ್ಯೇಕ ಮತದಾರ ಸಂಘವನ್ನು ಕಲ್ಪಿಸುವಂತೆ ಮೈಸೂರಿನ ಮುಂದಿನ ರಾಜಕೀಯ ಘಟನೆಯಲ್ಲಿ ತಿದ್ದುಪಡಿಯಾಗಬೇಕೆಂದು ಕೇಳಿಕೊಂಡಿದೆ.

ಮೈಸೂರಿನಲ್ಲಿಯ ಮುಸ್ಲಿಂಲೀಗು ಈ ರೀತಿ ಕೇಳುವುದರಲ್ಲಿ ನಮಗಂತೂ ಆಶ್ಚರ್ಯವೆನಿಸುವುದಿಲ್ಲ. ಯಾಕೆಂದರೆ ಆ ಸಂಸ್ಥಾನಕ್ಕೆ ಅಲ್ಲಿಯ ಮುಸ್ಲಿಂ ಲೀಗು ಅನೇಕ ರೀತಿಯಿಂದ 'ಸೇವೆ' ಸಲ್ಲಿಸಿದ್ದು ತನ್ನ ಸೇವೆಯ ಪ್ರತಿಫಲಗಳನ್ನು ಅದು ಈಗ ಕೇಳುತ್ತಿದೆ. ಮೈಸೂರಿನ ಜನತೆ ಈಗಲಾದರೂ ಎಚ್ಚರಾಗಿ ಮೈಸೂರಿನಲ್ಲಿ ಬೆಳೆಯುತ್ತ ಸಾಗಿರುವ ಈ ಪಾಕೀಸ್ತಾನದ ವಿರಿಯು ಅಲ್ಲಿ ಜಾತೀಯ ವಾತಾವರಣವನ್ನು ಇನ್ನಷ್ಟು ಕಲಕು ಮಾಡದಂತೆ ಜಾಗ್ರತೆ ವಹಿಸಲಿ ಇಲ್ಲದೆ ಹೋದರೆ ಭಾರತವು ಇಂದು ಪಡುತ್ತಿರುವ ಯಾತನೆಯನ್ನೇ ಮೈಸೂರು ಸಹಾ ಅನುಭವಿಸಬೇಕಾಗಿ ಬಂದೀತು (ಜ)

ಸುರಾದಾಯ

ನೈಜಾಂ ಸರ್ಕಾರವು ಆಬ್ಕಾರಿ ಬಾಬಿನಿಂದ ವರ್ಷ ಒಂದಕ್ಕೆ ಅರು ಕೋಟಿ ರೂಪಾಯಿಗಳ ಆದಾಯವನ್ನು ಹೊಂದುತ್ತಿದೆ ಜಮಾನು ಕಂದಾಯಕ್ಕಿಂತ ಈ ಆದಾಯ ಹೆಚ್ಚಾಗಿದೆ.

ರವೀಂದ್ರರ ಭಾಷಣ

ಮೈಸೂರು ರಂಗಾಚಾರ್ಲು ಪುರಭವನದಲ್ಲಿ ನಿನ್ನೆ ಸಂಜೆ ಶ್ರೀ ಶ್ರೀಕಂಠಪ್ಪನವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ರವೀಂದ್ರವರ್ಮರು ಭಾಷಣ ಮಾಡುತ್ತಾ ಮೈಸೂರು ವಿದ್ಯಾರ್ಥಿಗಳು ತ್ಯಾಗ ಇತ್ಯಾದಿಗಳಲ್ಲಿ ಭಾರತಕ್ಕೆ ಮಾದರಿಯಾಗಿದ್ದಾರೆ ವಿದ್ಯಾರ್ಥಿಗಳು ರಚನಾತ್ಮಕ ಕಾರ್ಯದೆಡೆ ಗಮನಕೊಡಬೇಕೆಂದು ತಿಳಿಸಿದರು

ಶ್ರೀ ಶ್ರೀಕಂಠಪ್ಪನವರು ಭಾಷಣ ಮಾಡುತ್ತಾ ಮೈಸೂರು ಗಡಿಯಲ್ಲಿ ದರೋಡೆಗಾರರ ಗಲಭೆ ಎಂಬ ಪ್ರಭುತ್ವ ಪ್ರಕಟಣೆ ಬಗ್ಗೆ ತಿಳಿಸುತ್ತಾ, ಅವರು ದರೋಡೆಗಾರರಲ್ಲ 1300 ಮಂದಿ ಸಮತಾವಾದ ಪಕ್ಷದ ರೈತರುಗಳು ಎಂದರು

ಶ್ರೀ ಕೃಷ್ಣರಾಯರು ಭಾಷಣ ಮಾಡುತ್ತಾ ದಿವಾನರ ವಜ್ರೋತ್ಸವ ನಿಧಿಯನ್ನೆಲ್ಲ ಬಡಬಗ್ಗರಿಗೆ ಹಂಚಿಬಿಡಬೇಕೆಂದು ತಿಳಿಸಿದರು

ಮುಸ್ಲಿಮೇತರ ಮಹಾ ಕೊಲೆ

ನವದೆಹಲಿ, ಅ 15 — ಪಶ್ಚಿಮ ಪಂಜಾಬೂ ಪೂರ್ವಾಲಿಂದ ಭಾರತ ಸೇನೆ ವಾಪಸಾಯಿತು ಅದನ್ನು ನೋಡಿ ಪಾಕೀಸ್ತಾನದ ಹತ್ತು ಸಾವಿರ ಮಂದಿ ಅಲ್ಲಿಗೆ ನುಗ್ಗಿ ಮುಸ್ಲಿಮೇತರ ಬಹು ಮಂದಿಯನ್ನು ಹತ ಮಾಡಿಡ ಹೃದಯ ವಿದ್ರೇದ ವಾರ್ತೆ ಬಂದಿದೆ

ಸಂಧಾನ ಸಮಿತಿ

ಪಾಕೀಸ್ತಾನದ ರಾಜ್ಯಾಂಗ ಸಭೆ ಸಂಸ್ಥಾನ ಸಂಧಾನ ಸಮಿತಿಯೊಂದನ್ನು ಸ್ಥಾಪಿಸಿದೆ

ಭಾರತ ವಿಜಯ

ಲೇಕ್ ಸಸೆಕ್ಸ್, ಅ 16—ಆಗ್ನೇಯ ಆಫ್ರಿಕಾವನ್ನು ವಿಶ್ವಸಂಸ್ಥೆಯ ಟ್ರಸ್ಟಿಷಿಪ್‌ಗೆ ಒಳಪಡಿಸಬೇಕೆಂದು ದಕ್ಷಿಣ ಆಫ್ರಿಕಾ ಸರಕಾರವನ್ನು ಒತ್ತಾಯಪಡಿಸಬೇಕೆಂಬ ಭಾರತದ ಠರಾವು ಮಂಜೂರಾಯಿತು.

ವಿವಿಧ ವರ್ತಮಾನ

ಮೈಸೂರು ಸಂಸ್ಥಾನದ ವಿದ್ಯಾರ್ಥಿ ಕಾಂಗ್ರೆಸ್ ಸತ್ಯಾಗ್ರಹ ಕಾಲದಲ್ಲಿ ತೀವ್ರ ದಬ್ಬಾಳಿಕೆ ನಡೆಸಿದವರನ್ನು ವಿಚಾರಣೆಗೊಳಪಡಿಸುವ ಸಲುವಾಗಿ ವಿಚಾರಣಾ ಸಮಿತಿಯನ್ನು ನೇಮಿಸುವದು. ತಪ್ಪಿಸ್ಥರನ್ನು ಮೈಸೂರು ಕಾಂಗ್ರೆಸ್ ವಿಚಾರಣಾ ಸಮಿತಿ ಸುಮ್ಮನೆ ಬಿಟ್ಟು ಬಿಟ್ಟರೆ ವಿದ್ಯಾರ್ಥಿ ಕಾಂಗ್ರೆಸ್ ಸುಮ್ಮನಿರುವುದಿಲ್ಲವೆಂದು ತಿಳಿದುಬಂದಿದೆ.

o o

ಹೈದರಾಬಾದ್ ಸತ್ಯಾಗ್ರಹದಲ್ಲಿ ಭಾಗವಹಿಸಲು ಮುನ್ನೂರು ಮಂದಿ ಮೈಸೂರು ಸಂಸ್ಥಾನದಿಂದ ಹೋಗಲಿದ್ದಾರೆಂದು ಗೊತ್ತಾಗಿದೆ

o o

ನಿರಾಶ್ರಿತರಿಗಾಗಿ ಮಧುರಾ ಮತ್ತು ಷಹಜರ್ಹಾನ್‌ಪುರದಿಂದ 3 ಲಕ್ಷ ಗಜ ಸರಟು ಬಟ್ಟೆ, 3 ಲಕ್ಷ ಗಜ ಮಲ್ಲು 1 ಲಕ್ಷ ತೆಳು ಸುಪ್ಪತ್ತಿಗೆ 1 ಲಕ್ಷ ಲುಂಗಿ ಬಂಡಿದೆಯೆಂದು ಪೂರ್ವ ಪಂಜಾಬು ನಿರಾಶ್ರಿತ ಇಲಾಖೆ ಪ್ರಕಟಿಸಿದೆ.

o o

ಚಳ್ಳಕೆರೆಯಲ್ಲಿ ಎ ಎಂ ಸಿ ಮಿಟಿಂಗನ್ನು ನಡೆಸಬೇಕೆಂದು ಅಲ್ಲಿಯ ಪೌರರು ಕಾಂಗ್ರೆಸ್ ಅಧ್ಯಕ್ಷರಲ್ಲಿ ತಂತೀ ಮೂಲಕ ಮನವಿ ಮಾಡಿದ್ದಾರೆ.

o o

ಹೈದರಾಬಾದ್, ಅ 15 — ಕಳೆದ ಆರು ವಾರಗಳಿಂದ ಸುಮಾರು ಒಂದೂ ಲಕ್ಷ ಮಂದಿ ಹೈದರಾಬಾದಿನಲ್ಲಿ ಮಧ್ಯ ಪ್ರಾಂತ್ಯದ ಜನರು ಬಂದು ನೆಲಸಿದ್ದಾರೆಂದು ಅನಧಿಕೃತ ವಾರ್ತೆ.

o o

ಸೊರಬ ಮತ್ತಿತರ ತಾಲ್ಲೂಕುಗಳಲ್ಲಿ ಮಿಲಿಟರಿ ಕಾಲಾಳು ಪಡೆಗಳವರು ಗಲಾಟೆ ಮಾಡುತ್ತಾ ಲೂಟಿ ಮಾನಾಪಹರಣ ಮಾಡುತ್ತಿರುವರೆಂದು ಹೇಳಲಾಗಿದೆ.

ಹೈದರಾಬಾದಿಗೆ ಮುಸ್ಲಿಂರ ರವಾನೆ

ಪಿತೂರಿ ಇರಬಹುದೇ ?

ನವದೆಹಲಿ ಅ 15 — ಹೈದರಾಬಾದಿನ ಸುತ್ತಮುತ್ತಲ ಪ್ರಾಂತ ಸರಕಾರ ಮತ್ತು ಸಂಸ್ಥಾನಗಳಿಗೂ ಅವುಗಳಲ್ಲಿರುವ ಮುಸ್ಲಿಂರು ಹೈದರಾಬಾದು ಸಂಸ್ಥಾನಕ್ಕೆ ಹೋಗಿ ಸೇರುತ್ತಿರುವುದನ್ನು ತಪ್ಪಿಸಬೇಕೆಂದು ಭಾರತ ಸರ್ಕಾರ ತಿಳಿಸಿದೆ ಈ ಮುಸ್ಲಿಂ ಒಳಾಡಳಿತವು ತಕ್ಕುದಲ್ಲವೆಂದೂ ರೈಲ್ವೆ ಪ್ರಯಾಣ ಜನರು ತಗ್ಗಿಸಬೇಕಾಗಿರುವ ಈ ಕಾಲದಲ್ಲಿ ಈ ಗುಂಪು ಗುಂಪು ಪ್ರವಾಸ ಸರಿಯಲ್ಲವೆಂದೂ ಹೈದರಾಬಾದು ಸಂಸ್ಥಾನಕ್ಕೆ ಮುಸ್ಲಿಂ ಸಂಖ್ಯೆ ಹೆಚ್ಚಿಸಲು ಇರಾದೆಯೆಂದೂ ಹೇಳಲಾಗಿದೆ ರಾಜಕೀಯ ಸಂಸ್ಥೆಯಾಂದರ ಒಳಸಂಚು ಇದಿರಬಹುದೆಂದು ಹೇಳಲಾಗಿದೆ

ಕಾಶ್ಮೀರವನ್ನು ಪಾಕೀಸ್ತಾನಕ್ಕೆ ಸೇರಿಸಿಕೊಳ್ಳುವ ಇರಾದೆಯಿದೆಯೆಂದೂ ಅದಕ್ಕಾಗಿ ಅದರ ವಿಚಾರದಲ್ಲಿ ಪತ್ರಿಕೆ ಮತ್ತು ರೇಡಿಯೋ ಮೂಲಕ ಅಪಪ್ರಚಾರಗಳಾಗುತ್ತಿದೆಯೆಂದೂ ಕಾಶ್ಮೀರಕ್ಕೆ ಪಾಕೀಸ್ತಾನ ಪೆಟ್ರೋಲು ಉಪ್ಪು ಮುಂತಾದುವನ್ನು ಮಾರಲು ತಿರಸ್ಕರಿಸಿದೆಯೆಂದೂ ತಿಳಿಯಬಂದಿದೆ.

ಅಮೇರಿಕಾ ದೇಶದ ವಸ್ತುಗಳನ್ನು ಬರ್ಮಾ ಬಹಿಷ್ಕರಿಸಿದೆ

ಮದರಾಸು ಅ 16— ಹಿಂದೂ ವಿವಾಹ ವಿಚ್ಛೇದ ಮಸೂದೆಯು ಶಾಸನ ಸಭೆಯಲ್ಲಿ ಚರ್ಚಿಸಲಾಗುತ್ತಿದೆ.

ಬೊಂಬಾಯಿ ಅ 15 — ಬುಧವಾರ 7 ಇರಿತಗಳು ನಡೆದಿವೆ ಎಂದು ವರದಿಯಾಗಿದೆ.

ರಂಗೂನ್ ಅ 15— ಬರ್ಮಾ ಮಂತ್ರಿ ಅಂಗಸಾನರ ಹತ್ಯೆಯ ಬಗ್ಗೆ ಯು ಸಾ ಮುಂತಾದವರ ಮೇಲಿನ ವಿಚಾರಣೆ ಪ್ರಾರಂಭವಾಗಿದೆ.

o o

ಹೈದರಾಬಾದು ಅ 16— ಹೈದರಾಬಾದು ಭಾರತ ಡೊಮಿನಿಯನ್ನಿಗೆ ಸೇರುವ ಬಗ್ಗೆ ಸಂಧಾನ ನಡೆಸುತ್ತಿರುವ ಚತ್ತಾರಿ ನವಾಬ ನಾಯಕತ್ವದ ಸಂಧಾನ ಸಮಿತಿಯವರೀ ದೆಹಲಿಗೆ ಪ್ರಯಾಣ ಬೆಳೆಸಿದರು.

ಧರ್ಮಯುದ್ಧ ಸಮಾಚಾರ

ಪ್ರ— ರಾಜಾ ಎಸ್. ಗುರುರಾಜಾಚಾರ್
ಅಖಿಲ ಕರ್ಣಾಟಕ ಸನಾತನಿಗಳ ಸಂಘ
ಮಂತ್ರಾಲಯ

ಕೇಂದ್ರ ಸರಕಾರವೂ ಗೋವಧೆ ನಿಲ್ಲಿಸುವುದೇ ?

ದೆಹಲಿ ಸೆ 19 — ಧರ್ಮಯುದ್ಧ ಪರಿಣಾಮವಾಗಿ ಮತ್ತು ಹಿಂದೂ ಮಹಾ ಸಭೆಯ ಆಂದೋಳನ ಮತ್ತು ಅ || ಭಾ || ಗೋವಧೆ ನಿವಾರಕ ಸಂಘದ ಶ್ರೀ ಸೇಟ್ ರಾಮಕೃಷ್ಣ ದಾಲ್ಮಿಯಾರವರ ಯಶಸ್ವೀ ಪ್ರಯತ್ನದ ಪರಿಣಾಮವಾಗಿ ಘಟನಾ ಸಮಿತಿಯು ಕಾಂಗ್ರೆಸ್ ಪಾರ್ಟಿಯು ಗೋವಧೆಯನ್ನು ನಿಲ್ಲಿಸುವ ಠರಾವನ್ನು ಸ್ವೀಕರಿಸಿ ಅದನ್ನು ಘಟನಾ ಸಮಿತಿಯಲ್ಲಿ ಮಂಡಿಸಲಿದೆ. ಬಹುಶಃ ಘಟನಾ ಸಮಿತಿಯಲ್ಲಿ ಇದು ಪಾಸಾಗಬಹುದೆಂದು ಊಹಿಸಲಾಗಿದೆ.

ಂ ಂ

ಕರಪಾತ್ರಜೀಯವರ ಭಂಧನ

ಮಥುರಾ ಆ 30 — ಸಂಯುಕ್ತ ಪ್ರಾಂತ್ಯದ ಸರಕಾರದವರು ಮಥುರಾದಲ್ಲಿ ನಡೆಯಲಿರುವ ಗೋವಧೆ ನಿರೋಧ ಸತ್ಯಾಗ್ರಹವನ್ನು ತಡೆಗಟ್ಟಲಿಕ್ಕಾಗಿ ಸತ್ಯಾಗ್ರಹ ಪ್ರಾರಂಭವಾಗುವ ಮೊದಲೇ ಶ್ರೀ ಸ್ವಾಮಿ ಕರಪಾತ್ರಜೀ ಮಹಾರಾಜರನ್ನು ದಸ್ತಗಿರಿ ಮಾಡಿದ್ದಾರೆ. ಇದರಿಂದ ಜನರು ಕೋಭಗೊಂಡು ಎಲ್ಲ ಕಡೆ ಹರತಾಳವನ್ನಾ ಚರಿಸಿದರು.

Save the Cow

ಗೋವಧೆ ನಿಲ್ಲಲಿ

At Opera
From 17–10–47

Daily 3 Shows

Roop-Nagar

— starring —

Jayant — Raj Rani

Morning Shows —
From 17—10—47

Greenich Village

(TECHNICOLOR)

Office of the President
City Municipal Council

Mysore, dated 11 th Oct 1947

NOTIFICATION

Notice is hereby given that sealed tenders will be received at the Office of the President, City Municipal Council, Mysore, upto 4 p m on thursday the 30 th Oct 1947 for running (a) a decent Restaurant and (b) a decent stall for fruit, Pan-Supari Etc, in the New Bus Terminus Buildings Mysore City, the lease running for a period of three years from 1 st November 1947 or from the date of handling over possession of the building

For further particulers refer to this office notification dated 10 th Oct 1947, on the subject and enquiry in the Municipal office, Revenue Section during working hours.

(sd) N S Hirannayya
President

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತ್ತಾದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

ವುಡ್‌ಲ್ಯಾಂಡ್ಸ್

ನಲಿಯುವ 4 ನೇ ವಾರ

ರಂಜನ — ಜೀಪ್ — ಬೇಬಿ ಮಾಧುರಿ
ಪಾತ್ರವಹಿಸಿರುವ

ನೈಮಾ

(ಆನೋಘ ಹಿಂದಿ ಚಿತ್ರ)
ಪ್ರತಿ ದಿನ 2 ಆಟಗಳು

Woodlands

Morning Shows at 10-30
From 17—10—47 For 4 days

Three Strangers

Featuring—
Sydney Greenstreet
Geraldine Fitzgerald
Peter Lorre

Office of the
Rationing Officer
Mysore City
Dated 9th October 47
No. R 1 - 134 / 47

Notification

Applicatons in C.R,B. Forms are invited from Backward community candidates possessing minimum S. S. L. C. qualification with Typewriting and Shorthand far the post of a Steno-typist in this Office.

The post carries a pay of Rs, 50 with usual dearness allowance, Intending candidates may apply to the undersigned on or before 20 th October 1947.

M. Srinivasalu Naidu
Rationing Officer
Mysore City

Edited, Printed and Published by M. S Krishna Rao at the Satyavadi Press Chamarja Agrahar Mysore.